ಅಧ್ಯಕ್ಷರು: ಕರಡಿಗಳಾಗಿರಬಹುದು, ಆನೆಗಳಾಗಿರಬಹುದು, ಎಲ್ಲಾ ಊರೊಳಗೆ ಬರುತ್ತಿವೆ. ಕೋಲಾರದಂತಹ ಊರಿಗೆ ಇವತ್ತು ಆನೆಗಳನ್ನು ಬರುವುದಕ್ಕೆ ಪ್ರಾರಂಭ ಮಾಡಿವೆ. ಕಾರಣವೇನೆಂದರೆ, ಅವುಗಳು ಇರುವಂತಹ ಪ್ರದೇಶದಲ್ಲಿ ಹುಲ್ಲು ಸಿಗುತ್ತಿಲ್ಲ, ಕುಡಿಯುವ ನೀರು ಸಿಗುತ್ತಿಲ್ಲ, ಆ ಕಾರಣಕ್ಕಾಗಿ ಹಳ್ಳಿಗಳಿಗೆ ಬರುವುದಕ್ಕೆ ಪ್ರಾರಂಭ ಮಾಡಿವೆ. ಅದನ್ನು ಸ್ವಲ್ಪ ನೋಡಿಕೊಳ್ಳಿ.

ಶ್ರೀ ಕೆ.ಎಂ.ಶಿವಲಿಂಗೇಗೌಡ: ಸಣ್ಣ ನೀರಾವರಿಯಲ್ಲಿ AIDP ಯಲ್ಲಿ ಚೆಕ್ ಡ್ಯಾಂಗಳನ್ನು ಕಟ್ಟುತ್ತಾರೆ. ನಮ್ಮ ಕ್ಷೇತ್ರದಲ್ಲಿ 10 ಚೆಕ್ ಡ್ಯಾಮಗಳನ್ನು ಕಟ್ಟುದಕ್ಕೆ ಬಂದವರನ್ನು ಅರಣ್ಯ ಇಲಾಖೆಯವರು ವಾಪಾಸ್ ಕಳುಹಿಸಿದ್ದಾರೆ. ಅದಕ್ಕೆ ಅನುಮತಿ ಕೊಡಿಸಿ. ನೀವು ಅಷ್ಟು ಮಾಡಿ ಸಾಕು. ಆ ನೀರು ಅಲ್ಲಿ ನಿಲ್ಲುತ್ತದೆ, ಅವುಗಳು ನೀರು ಕುಡಿದುಕೊಂಡು ಅಲ್ಲಿಯೇ ಇರುತ್ತವೆ.

ಶ್ರೀ ಬಿ. ರಮಾನಾಥ ರೈ: ಪರಿಶೀಲನೆ ಮಾಡಿ ನಾವು ಇದರ ಬಗ್ಗೆ ಕ್ರಮ ತೆಗೆದುಕೊಳ್ಳುತ್ತೇವೆ

Promotion of Cotlage Industries

9(143) ಶ್ರೀ ಸುರೇಶ್ ಬಾಬು ಸಿ.ಬಿ (ಚಿಕ್ಕನಾಯಕನಹಳ್ಳಿ) : ಮಾನ್ಯ ಜವಳಿ ಹಾಗೂ ಬಂದರು ಮತ್ತು ಒಳನಾಡು ಜಲಸಾರಿಗೆ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) ಚಿಕ್ಕನಾಯಕನಹಳ್ಳಿ ಮತ ಕ್ಷೇತ್ರ ವ್ಯಾಪ್ತಿಯಲ್ಲಿ ಕಂಬಳಿ ತಯಾರಿಕಾ ಉದ್ಯೋಗ ಹೆಚ್ಚಿನ ರೀತಿಯಲ್ಲಿ (ಗುಡಿ ಕೈಗಾರಿಕೆ) ನಡೆಯುತ್ತಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ:

ಆ) ಈ ಗುಡಿ ಕೈಗಾರಿಕೆಯನ್ನು ಉತ್ತೇಜಿಸಲು ಸರ್ಕಾರ ಕೈಗೊಂಡಿರುವ ಕ್ರಮಗಳೇನು.

ಇ) ಹಾಗಿದ್ದಲ್ಲಿ, ಸದರಿ ಕೈಗಾರಿಕಾ ನೌಕರರು ಮತ್ತು ಅವರ ಮಕ್ಕಳಿಗೆ ವಿದ್ಯಾಭ್ಯಾಸ, ಸರ್ಕಾರ ನೀಡುತ್ತಿರುವ ಸವಲತ್ತುಗಳೇನು (ವಿವರ ನೀಡುವುದು)?

ಶ್ರೀ ಬಾಬುರಾವ್ ಚಿಂಚನಸೂರ್ (ಮಾನ್ಯ ಜವಳಿ ಹಾಗೂ ಬಂದರು ಮತ್ತು ಒಳನಾಡು ಜಲಸಾರಿಗೆ ಸಚಿವರು)

ಅ) ಹೌದು

ಆ) ಚಿಕ್ಕನಾಯಕನಹಳ್ಳಿ ಮತ ಕ್ಷೇತ್ರದಲ್ಲಿ 02 ಉಣ್ಣೆ ಕೈಮಗ್ಗ ನೇಕಾರ ಸಹಕಾರ ಸಂಘಗಳು ಕಾರ್ಯನಿರ್ವಹಿಸುತ್ತಿದ್ದು. ಈ ಮತಕ್ಷೇತ್ರದಲ್ಲಿ ಸುಮಾರು 400 ಉಣ್ಣೆ ನೇಕಾರರ ಕಾರ್ಯ ನಿರ್ವಹಿಸುತ್ತಿರುತ್ತಾರೆ ಈ ಗುಡಿ ಕೈಗಾರಿಕೆಯನ್ನು ಉತ್ತೇಜಿಸಲು ಸರ್ಕಾರವು ಈ ಕೆಳಕಂಡ ಯೋಜನೆಗಳನ್ನು ಅನುಷ್ಠಾನಗೊಳಿಸುತ್ತಿದೆ.

- ಕೇಂದ್ರ ಪುರಸ್ಕೃತ (ಐ.ಹೆಚ್.ಡಿ.ಎಸ್) ಸಮಗ್ರ ಕೈಮಗ್ಗ ಅಭಿವೃದ್ಧಿ ಯೋಜನೆಯಡಿ ಉಣ್ಣೆ, ನೇಕರರಿಗೆ ವಿವಿಧ ಅಭಿವೃದ್ಧಿ ಕಾರ್ಯ ಕ್ರಮಗಳ ಸೌಲಭ್ಯಗಳನ್ನು ನೀಡಲು ಕ್ಲಸ್ಟರ್ ಸ್ಥಾಪಿಸಲಾಗಿರುತ್ತದೆ. ನೈಪುಣ್ಯತೆ ತರಬೇತಿ. ಅಧ್ಯಯನ ಪ್ರವಾಸ, ಸುಧಾರಿತ ಮಗ್ಗ ಮತ್ತು ಸಲಹೆಗಳನ್ನು ಒದಗಿಸುವುದು. ಮಾರುಕಟ್ಟೆ ಉತ್ತೇಜನ, ಹೊಸ ವಿನ್ಯಾಸ ಮತ್ತು ಪ್ರವೃತ್ತಿ ಡಿಸೈನ್ ಸಿದ್ದಪಡಿಸುವುದ, ದುಡಿಮೆ ಬಂಡ ವಾಳ, ಬೈಯರ್–ಸೆಲ್ಲರ್ಸ್ ನಡೆಯುವ ಬಾಂದವ್ಯ, ಮತ್ತು ಸಾಮೂ ಹಿಕ ಸೌಲಭ್ಯ ಕೇಂದ್ರ ನಿರ್ಮಾಣ ಮುಂತಾದ ಸೌಲಭ್ಯಗಳನ್ನು 230 ನೇಕಾರರಿಗೆ ನೀಡಲಾಗಿದೆ.

- 2013–2014ನೇ ಸಾಲಿನಲ್ಲಿ ಎಂ.ಜಿ.ಬಿ.ಬಿ.ವೈ.ಯೋಜನೆಯಡಿ 1273 ನೇಕಾರರನ್ನು ಸೇರಿಸಲಾಗಿದೆ. ಇದರಲ್ಲಿ ಮೃತ ನೇಕಾರರ ವಾರಸು ದಾರರಿಗೆ ವಿಮಾ ಪರಿಹಾರ ಮತ್ತು ನೇಕಾರರ ಮಕ್ಕಳಿಗೆ ವಿದ್ಯಾರ್ಥಿ ವೇತನ ನೀಡಲಾಗಿದೆ.

- ಆರೋಗ್ಯ ವಿಮಾ ಯೋಜನೆಯಡಿ ವೈದ್ಯಕೀಯ ವೆಚ್ಚ ಮರುಪಾವತಿ ಮಾಡಲಾಗಿದೆ.

- ಕೈಮಗ್ಗ ನೇಕಾರರಿಗೆ ಕ್ರೆಡಿಟ್ ಕಾರ್ಡ ಸೌಲಭ್ಯ ನೀಡಲಾಗಿದೆ.

- ನೇಕಾರರ ಕಲ್ಯಾಣ ಯೋಜನೆಯಡಿ ವಿದ್ಯಾರ್ಥಿ ವೇತನ ಮತ್ತು ಮೃತ ನೇಕಾರರಿಗೆ ಅಂತ್ಯಸಂಸ್ಕಾರ ವೆಚ್ಚ ಮರುಪಾವತಿ ನೀಡಲಾಗಿದೆ.
- ವಸತಿ ರಹಿತ ನೇಕಾರರಿಗೆ ವಸತಿ ಸಹಿತ ಕಾರ್ಯಗಾರ ನಿರ್ಮಾಣ
- 2013–14ನೇ ಸಾಲಿನ ಆಯವ್ಯಯದಲ್ಲಿ ಘೋಷಿಸಿರುವ ಉಣ್ಣೆ ವಲಯ ನೇಕಾರರ ಅಭಿವೃದ್ಧಿಗಾಗಿ ಉಣ್ಣೆ ಕತ್ತರಿಸುವ ಯಂತ್ರ, ಸುಧಾರಿತ ಕಾರ್ಡಿಂಗ್ ಯಂತ್ರ, ಮೆಡಲೇರಿ ಚರಕ, ಕೌಶಲ್ಯಾಭಿವೃದ್ಧಿ ಕೇಂದ್ರ ಸ್ಥಾಪನೆ, ವಸತಿಸಹಿತ ಕಾರ್ಯಗಾರ, ಸಾಮೂಹಿಕ ಸೌಲಭ್ಯಗಳನ್ನು ನೀಡಲು ಕ್ರಮ ಕೈಗೊಳ್ಳಲಾಗಿದೆ.
- ಜಿಲ್ಲಾ ವಲಯ ಎಂಪಿಕ್ ಯೋಜನೆಯಡಿ ನೇಕಾರ ಸಹಕಾರ ಸಂಘ ಗಳ ಮೂಲಕ ಸುದಾರಿತ ಮಗ್ಗ ಮತ್ತು ಸಲಕರಣೆಗಳನ್ನು ನೀಡ ಲಾಗಿದೆ.
- 2012–13ನೇ ಸಾಲಿನ ಎಂ.ಜಿ.ಬಿ ವೈ. ಯೋಜನೆಯಡಿ 188 ಮಕ್ಕಳಿಗೆ ತಲಾ ರೂ.1200/–ರಂತೆ ಒಟ್ಟು 2,25,600/–ಗಳನ್ನು ಹಾಗೂ ನೇಕಾ ರರ ಕಲ್ಯಾಣ ಯೋಗನೆಯಡಿ 64 ನೇಕಾರರ ಮಕ್ಕಳಿಗೆ ರೂ.76,164/–ಗಳ ವಿದ್ಯಾರ್ಥಿ ವೇತನವನ್ನು ಬಿಡುಗಡೆ ಮಾಡಲಾಗಿದೆ.
- 2013–14ನೇ ಸಾಲಿಗೆ ಎಂ.ಜಿ.ಬಿ.ವೈ. ಯೋಜನೆಯಡಿ 181 ವಿದ್ಯಾರ್ಥಿಗಳಿಗೆ ರೂ.2,17,200/–ಗಳ ವಿದ್ಯಾರ್ಥಿ ವೇತನ ಮಂಜೂರು ಮಾಡಲು ಹಾಗೂ ನೇಕಾರರ ಕಲ್ಯಾಣ ಯೋಜನೆಯಡಿ 81 ನೇಕಾರರ ಮಕ್ಕಳಿಗೆ ರೂ 1,15,300/–ಗಳ ವಿದ್ಯಾರ್ಥಿ ವೇತನ ಮಂಜೂ ರಾತಿಗೆ ಕ್ರಮವಹಿಸಲಾಗಿದೆ.

Replay

ಅ) Yes

ಆ) In Chikkanayakanahalli Constituency 02 Woolen Weavers co-operative societies are working Above 400 woolen weavers are working in the constituency To encourage these weavers the Govrenment implementing the following schemes

- Under I H D S scheme Cluster has been developed to provide several developmental programs to woolen weavers Under this scheme training, study tour, improved looms and accessories, Marketing support, development of new designs, working capital, Buyer's-seller's meet and common facility centre have been provided to 230 weavers
- During 2013-14, 1273 weavers are being enrolled under MGBBY Out of this scholarship to weavers children has been provided and insurance claim has been settled to deceased weavers
- Medical reimbursement has been provided under health insurance scheme.
- Credit Card facility has been provided to handloom wearvers
- Scholarship has been provided to weavers children and reimbursements of funeral expenditure to decreased weavers have been provided under weaver welfare scheme
- Living cum workshed has been provided to houseless weavers.
- Action has been taken tp provide facilities like woolen cutting machines, improved carding machines, medlery charaka,

establishment of skill Development Centre, living cum workshed, common facility centre and other facilities under the scheme "Development of woolen sector" newly announced during the budget of 2013-14

- Improved looms and accessories are being provided through Run on weavers co-operative societiesunderdistrict sector

ಇ) During 2012-13 under MGBBY scheme 188 weavers children have been sanctioned Scholarship of Rs 1200/- each total amounting to Rs 2,25,600/- 64 weavers children have been sanctioned scholarship of Rs 76,164/- under Assistance to Handloom co-operatives

- During 2013-14 under MGBBY scheme 181 weavers children have been sanctioned Scholarship of Rs 1200/- each total amounting to Rs 2,17,200/-.81 weavers children have been sanctioned scholarship of Rs 1,15,300/- under Assistance to Handloom co-operatives

ಶ್ರೀ ಬಿ.ಸಿ.ಸುರೇಶ್ ಬಾಬು: ಮಾನ್ಯ ಅಧ್ಯಕ್ಷರೆ, ಕಂಬಳಿ ತಯಾರಿಕೆ ಮಾಡುವ ಹಲವಾರು ಕುಟುಂಬಗಳು ನಮ್ಮ ಕ್ಷೇತ್ರದಲ್ಲಿ ಜೀವನ ಮಾಡುತ್ತಿದ್ದಾರೆ. ಅದಕ್ಕೆ ತಕ್ಕ ಬೆಲೆ ಸಿಗುತ್ತಿಲ್ಲ, ಮಾರಾಟಕ್ಕೆ ಕೂಡ ಹೆಚ್ಚಿನ ರೀತಿಯಲ್ಲಿ ವ್ಯವಸ್ಥೆ ಆಗುತ್ತಿಲ್ಲ. ಇವುಗಳನ್ನೆಲ್ಲಾ ಸರಿಪಡಿಸುವುದಕ್ಕೆ ಮಾನ್ಯ ಸಚಿವರು ಏನು ಕ್ರಮ ತೆಗೆದುಕೊಂಡಿದ್ದಾರೆಂದು ಕೇಳುವುದಕ್ಕೆ ಬಯಸುತ್ತೇನೆ.

ಶ್ರೀ ಸಿ.ಬಿ.ಬಾಬುರಾವ್ ಚಿಂಚನಸೂರ್:– ಮಾನ್ಯ ಅಧ್ಯಕ್ಷರೆ, ಚಿಕ್ಕನಾಯಕನಹಳ್ಳಿಗೆ ಸಂಬಂಧಪಟ್ಟಂತೆ ಏನು ಕೇಳಿದ್ದಾರೆ ಅದು ನನಗೆ ಬರುವುದಿಲ್ಲ. ಚಿಕ್ಕನಾಯಕನಹಳ್ಳಿ ಮತಕ್ಷೇತ್ರದಲ್ಲಿ ಎರಡು ಉಣ್ಣೆ ಕೈಗಾರಿಕೆಗಳು ಸ್ಥಾಪನೆಯಾಗಿವೆ. ಅಲ್ಲಿ 400 ಜನ ಉಣ್ಣೆ ನೇಕಾರರು ಕೆಲಸವನ್ನು ಮಾಡುತ್ತಿದ್ದಾರೆ.

ಈಗಾಗಲೇ ಕೇಂದ್ರ ಸರ್ಕಾರದಿಂದ ಸಮಗ್ರ ಕೈಮಗ್ಗ ಅಭಿವೃದ್ಧಿ ಯೋಜನೆ ಯಡಿಯಲ್ಲಿ ಉಣ್ಣೆ ನೇಕಾರರಿಗೆ ವಿವಿಧ ಅಭಿವೃದ್ಧಿ ಕಾರ್ಯಕ್ರಮಗಳ ಸೌಲಭ್ಯ ಗಳನ್ನು ನೀಡಲು ಕ್ಲಸ್ಟರ್ ಸ್ಥಾಪಿಸಲಾಗಿರುತ್ತದೆ. ಇದರಲ್ಲಿ ನೈಪುಣ್ಯತೆ ತರಬೇತಿ, ಅಧ್ಯಯನ ಪ್ರವಾಸ, ಸುಧಾರಿತ ಮಗ್ಗ ಮತ್ತು ಸಲಕರಣೆಗಳನ್ನು ಒದಗಿಸು ವುದು, ಮಾರುಕಟ್ಟೆ ಉತ್ತೇಜನ, ಹೊಸ ವಿನ್ಯಾಸ ಮತ್ತು ಪ್ರವೃತ್ತಿ ಡಿಸೈನ್ ಸಿದ್ಧಪಡಿಸುವುದು, ದುಡಿಮೆ ಬಂಡವಾಳ, ಬೈಯರ್ಸ್–ಸೆಲ್ಲರ್ಸ್ ನಡೆಯುವ ಬಾಂಧವ್ಯ ಮತ್ತು ಸಾಮೂಹಿಕ ಸೌಲಭ್ಯ ಕೇಂದ್ರ ನಿರ್ಮಾಣ ಮುಂತಾದ ಸೌಲಭ್ಯಗಳನ್ನು 230 ನೇಕಾರರಿಗೆ ನೀಡಲಾಗಿದೆ.

ಅಧ್ಯಕ್ಷರು:–ಮಾನ್ಯ ಸುರೇಶ್‌ರವರೆ, ಈಗ ಏನೇನು ಕ್ರಮಗಳನ್ನು ಕೈಗೊಂಡಿದ್ದೇವೆಂದು ಮಾನ್ಯ ಸಚಿವರು ಉತ್ತರದಲ್ಲಿ ಹೇಳಿದ್ದಾರೆ ಅದರಲ್ಲಿ ಕೊರತೆ ಏನಾಗಿದೆ ಎಂಬ ಬಗ್ಗೆ ತಾವು ಹೇಳಿ.

ಶ್ರೀ ಸಿ.ಬಿ.ಸುರೇಶ್‌ಬಾಬು:–ಉಣ್ಣೆ ನೇಯುವ ನೇಕಾರರ ಕುಟುಂಬ ಗಳಿಗೆ ಅಲ್ಲಿ ರಕ್ಷಣೆಯಿಲ್ಲ. ಅವರು ನೇಯ್ಗೆ ಮಾಡಿದ ಕಂಬಳಿಗಳ ಮಾರಟಕ್ಕೆ ಸರಿಯಾದ ಮಾರುಕಟ್ಟೆಯ ವ್ಯವಸ್ಥೆಯಿಲ್ಲ. ಇದಕ್ಕಾಗಿ ವಿಶೇಷವಾಗಿ ಒಂದು ಘಟಕವನ್ನು ಮಾಡಬೇಕು.

ಅಧ್ಯಕ್ಷರು:– ಸುರೇಶ್‌ರವರೆ, ಮಾನ್ಯ ಸಚಿವರು ಕೈಗೊಂಡಿರತಕ್ಕಂಥ ಕ್ರಮಗಳ ಒಂದು ಪಟ್ಟಿಯನ್ನು ನಿಮಗೆ ಮಾಡಿಕೊಟ್ಟಿದ್ದಾರೆ. ಆ ಪಟ್ಟಿಯಲ್ಲಿರ ತಕ್ಕಂಥ ಕಾರ್ಯಕ್ರಮಗಳು ಸೂಕ್ತವೇ ಅಥವಾ ಸೂಕ್ತವಲ್ಲವೇ ಎಂಬ ಬಗ್ಗೆ ಹೇಳಿ. ಇದರ ಜೊತೆಗೆ ಮುಂದೆ ಪರ್ಯಾಯವಾಗಿ ಏನು ಮಾಡಬೇಕು ಎಂಬ ಬಗ್ಗೆ ಸ್ಪಷ್ಟವಾಗಿ ಹೇಳಿ.

ಶ್ರೀ ಸಿ.ಬಿ. ಸುರೇಶ್ ಬಾಬು:– ನೇಕಾರರ ಕುಟುಂಬಗಳಲ್ಲಿರುವ 182 ಮಕ್ಕಳಿಗೆ ವಿದ್ಯಾರ್ಥಿವೇತನವನ್ನು ನೀಡಲಾದೆಯೆಂದು ಹೇಳಿದ್ದಾರೆ. ಚಿಕ್ಕ ನಾಯಕನಹಳ್ಳಿಯಲ್ಲಿ ಶೇ.80 ರಷ್ಟು ಉಣ್ಣೆ ನೇಕಾರರಿದ್ದಾರೆ. ಇವರು ಕೇವಲ 182 ಮಕ್ಕಳಿಗೆ ವಿದ್ಯಾರ್ಥಿವೇತನವನ್ನು ಕೊಟ್ಟುಬಿಟ್ಟುರೆ ಸಾಕೆ?

ಅಧ್ಯಕ್ಷರು:–ಇನ್ನೂ ಎಷ್ಟು ಮಕ್ಕಳಿಗೆ ವಿದ್ಯಾರ್ಥಿವೇತನವನ್ನು ಕೊಡಬೇಕು ಎಂದು ಹೇಳಿ

ಶ್ರೀ ಸಿ.ಬಿ.ಸುರೇಶ್‌ಬಾಬು:– ಉಣ್ಣೆ ನೇಯುವ ನೇಕಾರರ ಕುಟುಂಬದಲ್ಲಿರುವ ಎಲ್ಲ ಮಕ್ಕಳಿಗೂ ವಿದ್ಯಾರ್ಥಿವೇತನವನ್ನು ಕೊಡಬೇಕು.

ಶ್ರೀ ಬಾಬುರಾವ್ ಚಿಂಚನಸೂರ್:– ಮಾನ್ಯ ಅಧ್ಯಕ್ಷರೆ, ಮಾನ್ಯ ಸದಸ್ಯರು ನನಗೆ ಅಭಿನಂದನೆಯನ್ನು ಸಲ್ಲಿಸಬೇಕು. ಚಿಕ್ಕನಾಯಕನಹಳ್ಳಿಗೆ 35 ಲಕ್ಷ ರೂ ಗಳನ್ನು skill development ಗಾಗಿಯೇ ಕೊಟ್ಟಿದ್ದೇನೆ. 15 ಲಕ್ಷ ರೂ.ಗಳನ್ನು ಉಣ್ಣೆ ನೇಕಾರರಿಗಾಗಿ ಕೊಟ್ಟಿದ್ದೇನೆ. ಒಂದು ವಾರದಲ್ಲಿಯೇ ನಿಮ್ಮ ಕ್ಷೇತ್ರಕ್ಕಾಗಿ ಈ ಬಗ್ಗೆ ಆದೇಶವನ್ನು ಮಾಡಿದ್ದೇನೆ. ಇದಕ್ಕಾಗಿ ಮಾನ್ಯ ಸದಸ್ಯರೆ,ನೀವು ಸರ್ಕಾರಕ್ಕೆ ಅಭಿನಂದನೆಯನ್ನು ಸಲ್ಲಿಸಬೇಕು.

ಶ್ರೀ ಸಿ.ಬಿ.ಸುರೇಶ್‌ಬಾಬು:– ಮಾನ್ಯ ಸದಸ್ಯರೆ,ನಮ್ಮಲ್ಲಿ ಕಂಬಳಿ ನೇಯುವ ನೇಕಾರರ ಕುಟುಂಬಗಳು ಬಹಳ ಇವೆ.

ಅಧ್ಯಕ್ಷರು:– ಅದಕ್ಕಾಗಿ ಅವರಿಗೆ ಏನು ಮಾಡಬೇಕು ಎಂಬುದನ್ನು ಸ್ಪಷ್ಟವಾಗಿ ಹೇಳಿ.

ಶ್ರೀ ಸಿ.ಬಿ.ಸುರೇಶ್‌ಬಾಬು:– ಕಂಬಳಿ ನೇಯುವ ನೇಕಾರರ ಕುಟುಂಬಗಳಿಗೆ ಮನೆಗಳಾಗಬೇಕು ಕಂಬಳಿ ಭವನವಾಗಬೇಕು. ಕಂಬಳಿ ಮಾರಾಟಕ್ಕಾಗಿ ಉತ್ತಮ ಮಾರುಕಟ್ಟೆ ವ್ಯವಸ್ಥೆಯನ್ನು ಮಾಡಬೇಕು. ಈ ಮೊದಲು ಕೊಡಗಿನವರು ನಮ್ಮ ಕಂಬಳಿಗಳನ್ನು ತೆಗೆದುಕೊಂಡು ಹೋಗುತ್ತಿದ್ದರು. ಆದರೆ ಈಗ ಯಾರು ಕೂಡ ಕಂಬಳಿಗಳನ್ನು ತೆಗೆದುಕೊಂಡು ಹೋಗುತ್ತಿಲ್ಲ.

ಅಧ್ಯಕ್ಷರು:– ಈಗ ನೀವು ಒಂದು ಕೆಲಸ ಮಾಡಿ. ನಮ್ಮ ಸಾಗರದ ಹೆಗ್ಗೋಡಿನಲ್ಲಿ ಚಕ್ರ ಎನ್ನುವವರೊಬ್ಬರು ಉಣ್ಣೆ ನೇಕಾರರಿಗಾಗಿ ಕಾರ್ಯಕ್ರಮವನ್ನು ಮಾಡಿದ್ದಾರೆ. ಒಂದು ದಿವಸ ಅವರನ್ನು ನಿಮ್ಮ ಹತ್ತಿರ ಕಳುಹಿಸಿಕೊಡುತ್ತೇನೆ. ನೀವು ಅವರ ಜೊತೆ ನೇಕಾರರನ್ನು ಭೇಟಿ ಮಾಡಿಸಿ ಮತ್ತು ನೇಕಾರರನ್ನು ಯಾವ ರೀತಿಯಲ್ಲಿ ಬದುಕಲು ಅವಕಾಶ ಮಾಡಿಕೊಡಬಹುದು

ಎಂಬ ಬಗ್ಗೆ ಒಂದು ಕಾರ್ಯಕ್ರಮವನ್ನು ರೂಪಿಸಿ ನೀವು ಅದನ್ನು ಮಾನ್ಯ ಸಚಿವರ ಆ ಕೆಲಸವನ್ನು ಮಾಡಿಕೊಡುತ್ತಾರೆ.

ಶ್ರೀ ಸಿ.ಬಿ.ಸುರೇಶ್‌ಬಾಬು.– ಇದರ ಜೊತೆಗೆ ಈಗ ಮಾನ್ಯ ಮುಖ್ಯ ಮಂತ್ರಿಗಳೂ ಕೂಡ ಇರುವುದರಿಂದ ಒಂದೆರಡು ಮಾತುಗಳನ್ನು ಹೇಳುತ್ತೇನೆ. ಆಸ್ಪತ್ರೆಗಳಲ್ಲಿ, ಹಾಸ್ಟೆಲ್‌ಗಳಲ್ಲಿ ಮತ್ತು ಮಿಲಿಟರಿಯಲ್ಲಿರುವವರೆಲ್ಲರಿಗೂ ಹೊದ್ದು ಕೊಳ್ಳುವುದಕ್ಕಾಗಿ ಕಂಬಳಿಗಳನ್ನು ಖರೀದಿ ಮಾಡಲು ಅವಕಾಶ ಮಾಡಿಕೊಟ್ಟರೆ ನೇಕಾರರ ಕಂಬಳಿಗಳು ಮಾರಾಟವಾಗುವುದಕ್ಕೆ ಅವಕಾಶವಾಗುತ್ತದೆ.

ಅಧ್ಯಕ್ಷರು:– ನಮ್ಮಲ್ಲಿ ಹಿಂದೆ ಮಳೆಗಾಲದಲ್ಲಿ ಕಂಬಳಿಗಳನ್ನು ಹಾಕಿ ಕೊಳ್ಳುತ್ತಿದ್ದರು. ಈಗ ಯಾರೂ ಕಂಬಳಿಗಳನ್ನು ಹಾಕಿಕೊಳ್ಳುವುದಿಲ್ಲ. ಅದಕ್ಕಾಗಿ ನಾವು ಮತ್ತು ನೀವು ಈಗಿನ ರಗ್‌ಗಳನ್ನು ತೆಗೆದುಕೊಳ್ಳುವ ಬದಲು ಈ ಕಂಬಳಿಗಳನ್ನೇ ತೆಗೆದುಕೊಳ್ಳುವುದಕ್ಕಾಗಿ ಅವುಗಳನ್ನು ಇನ್ನೂ ಹೆಚ್ಚು ನೈಸಾಗಿ ಮಾಡುವುದು ಹೇಗೆ, ಇದನ್ನು ಕಮರ್ಶಿಯಲ್ ಆಗಿ ಮಾರಾಟವಾಗುವಂತೆ ಮಾಡಲು ಹೇಗೆ ಕಲಾತ್ಮಕವಾಗಿ ನೇಯ್ಗೆ ಮಾಡಬೇಕು ಎಂಬ ಬಗ್ಗೆ ನೇಕಾರರಿಗೆ ಸ್ವಲ್ಪ ತರಬೇತಿ ನೀಡಿ ಇದರ ಮಾರಾಟಕ್ಕೂ ವ್ಯವಸ್ಥೆಯನ್ನು ಮಾಡಬೇಕು.

ಶ್ರೀ ಸಿ.ಬಿ.ಸುರೇಶ್‌ಬಾಬು:– ಆ ರೀತಿಯ ಯಾವ ಕಾರ್ಯಕ್ರಮ ಗಳನ್ನೂ ಮಾನ್ಯ ಸಚಿವರು ಹಾಕಿಲ್ಲ.

ಶ್ರೀ ಬಾಬುರಾವ್ ಚಿಂಚನಸೂರ್:– 2012–13ನೇ ಸಾಲಿನಲ್ಲಿ ಎಂ.ಜಿ. ಬಿ.ವೈ. ಯೋಜನೆಯಡಿ 188 ಮಕ್ಕಳಿಗೆ ತಲಾ 1200/– ರೂ.ನಂತೆ ಒಟ್ಟು 2,25,600/– ರೂ.ಗಳನ್ನು ಹಾಗೂ ನೇಕಾರರ ಕಲ್ಯಾಣ ಯೋಜನೆಯಡಿಯಲ್ಲಿ 64 ಮಕ್ಕಳಿಗೆ ರೂ.76,160/– ವಿದ್ಯಾರ್ಥಿ ವೇತನವನ್ನು ಕೊಡಲಾಗಿದೆ. 2013–14ನೇ ಸಾಲಿನಲ್ಲಿ ಎಂ.ಜಿ.ಬಿ.ವೈ. ಯೋಜನೆಯಡಿ 181 ವಿದ್ಯಾರ್ಥಿಗಳಿಗೆ 2,17,200/– ರೂ.ಗಳ ವಿದ್ಯಾರ್ಥಿ ವೇತನವನ್ನು ಮಂಜೂರು ಮಾಡಲು ಮತ್ತು ನೇಕಾರರ ಕಲ್ಯಾಣ ಯೋಜನೆಯಡಿಯಲ್ಲಿ 81 ನೇಕಾರರ ಮಕ್ಕಳಿಗೆ

1,15,300/– ವಿದ್ಯಾರ್ಥಿ ವೇತನವನ್ನು ಮಂಜೂರಾತಿ ಮಾಡಲು ಕ್ರಮವಹಿಸ ಲಾಗಿದೆ.

ಅಧ್ಯಕ್ಷರು:– ಸಾಕು ಸಾಕು. ಈಗ ಚಿಂಚನ್‌ಸೂರ್‌ರವರೆ, ನಿಮಗೆ ಒಂದು ಸಲಹೆ ಕೊಡುತ್ತೇನೆ. ಉಣ್ಣೆ ನೇಕಾರರ ಕಂಬಳಿ ನೇಯುವ ಕಸಬು ಇವತ್ತು ಸಾಯುತ್ತಿವೆ. ಈ ನೇಕಾರರ ಉದ್ಯಮ ಲಾಭದಾಯಕವಾಗಬೇಕೇಂದರೆ ಒಂದು ಹೊಸ ಕಾಯಕಲ್ಪ ಮಾಡಿ ಒಂದು ಹೊಸ ಕಾಯಕಲ್ಪ ಮಾಡಿ ಒಂದು ಹೊಸ ಕಾರ್ಯಕ್ರಮವನ್ನು ರೂಪಿಸಿ

ಶ್ರೀ ಬಾಬುರಾವ್ ಚಿಂಚನಸೂರ್:– ಮಾನ್ಯ ಅಧ್ಯಕ್ಷರೆ, ಕರ್ನಾಟಕ ರಾಜ್ಯದಲ್ಲಿ ಪ್ರಪ್ರಥಮವಾಗಿ ಉಣ್ಣೆ ವಲಯಕ್ಕೆ 25 ಕೋಟಿ ರೂ.ಗಳನ್ನು ನಮ್ಮ ಮಾನ್ಯ ಮುಖ್ಯಮಂತ್ರಿಗಳು ಆಯವ್ಯಯದಲ್ಲಿ ಘೋಷಣೆ ಮಾಡಿದ್ದಾರೆ. ಆ ಯೋಜನೆಯಡಿಯಲ್ಲಿ skill centre subsidy ಯಾಗಿ 35 ಲಕ್ಷ ರೂ.ಗಳನ್ನು ಮಂಜೂರು ಮಾಡಿದ್ದೇವೆ ಮತ್ತು sewing machine ಗಾಗಿ 15 ಲಕ್ಷ ರೂ.ಗಳನ್ನು ನಾವು sanction ಮಾಡಿದ್ದೇವೆ

ಶ್ರೀ ಕೆ.ಎಸ್. ಪುಟ್ಟಣ್ಣಯ್ಯ:– ಮಾನ್ಯ ಅಧ್ಯಕ್ಷರೆ, ಕಂಬಳಿ ಉತ್ಪಾದನೆ ಮಾಡುವವರನ್ನು ರಕ್ಷಣೆ ಮಾಡಬೇಕೆಂದರೆ ಸರ್ಕಾರಿ ಆಸ್ಪತ್ರೆಗಳಲ್ಲಿ ಇದನ್ನು ಉಪಯೋಗಿಸುವ ಸಲುವಾಗಿ ಖರೀದಿ ಮಾಡಲು introduce ಮಾಡಬೇಕು. ಸರ್ಕಾರಿ ಆಸ್ಪತ್ರೆಗಳಲ್ಲಿ ಕಂಬಳಿಗಳನ್ನು purchase ಮಾಡಿದರೆ ಈ ಸಮಸ್ಯೆ ಬಗೆಹರಿಯುತ್ತದೆ.

ಅಧ್ಯಕ್ಷರು:– ಹೌದು. ಆ ರೀತಿ ಮಾಡಬೇಕು. ಮಾನ್ಯ ಚಿಂಚನ ಸೂರ್‌ರವರೆ, ನೇಕಾರರು ಮಾಡಿದ ಕಂಬಳಿಯನ್ನು ಆಸ್ಪತ್ರೆಗೆ ಕಡ್ಡಾಯವಾಗಿ ಖರೀದಿ ಮಾಡಿಸಿ.

ಶ್ರೀ ಬಾಬುರಾವ್ ಚಿಂಚನಸೂರ್:– ನಾನು ಬೈಯರ್ಸ್–ಸೆಲ್ಲರ್ ಗಳರವರನ್ನು ಕರೆಸಿ ಮೀಟಿಂಗ್ ಮಾಡಿ ಇದರ ಬಗ್ಗೆ ಪರಿಶೀಲನೆ ಮಾಡುತ್ತೇನೆ.

ಶ್ರೀ ಸಿ.ಬಿ.ಸುರೇಶ್‌ಬಾಬು:– ಮಾನ್ಯ ಅಧ್ಯಕ್ಷರೆ, ಆಸ್ಪತ್ರೆಗಳು, ಸ್ಕೂಲ್ ಗಳಲ್ಲಿ ಕಂಬಳಿಗಳನ್ನು purchase ಮಾಡಿದರೆ ಒಳ್ಳೆಯದು.

ಅಧ್ಯಕ್ಷರು:– ಶಾಸಕರುಗಳು ಕೂಡ ಕಂಬಳಿಗಳನ್ನು ಉಪಯೋಗಿಸ ಬೇಕು.

ಶ್ರೀ ಸಿ.ಬಿ ಸುರೇಶ್‌ಬಾಬು:– ಖಂಡಿತ, ನಾವು ಹೊದ್ದುಕೊಳ್ಳುವುದೇ ಅದು ದಯಮಾಡಿ ನೀವು ಅದನೇ ನಮಗೆ ಕೊಡಿಸಿ.

ಅಧ್ಯಕ್ಷರು:– ಕಡ್ಡಾಯವಾಗಿ ಪ್ರತಿಯೊಬ್ಬ ಮಾನ್ಯ ಸದಸ್ಯರುಗಳಿಗೆ ಎರಡೆರಡು ಕಂಬಳಿಗಳನ್ನು ಪೂರೈಕೆ ಮಾಡಿಸೋಣ. ನೋಡಿ ಈಗಲೇ ನಮ್ಮ ಸೆಕ್ರೆಟರಿಯವರಿಗೆ ಹೇಳುತ್ತಿದ್ದೇನೆ, ಎಷ್ಟು ಕಂಬಳಿ ಬೇಕಾದರು. ಶಾಸಕರಿಗಾಗಿ ಕೊಡಲಿ, ಈಗ 1000 ಕಂಬಳಿಗಳನ್ನು ಕೊಡಲು ಕ್ರಮ ತೆಗೆದುಕೊಳ್ಳಿ. ನೋಡಿ ಸುರೇಶ್‌ರವರೆ, ಒಂದು ಸಾವಿರ ಕಂಬಳಿಗಳನ್ನು ಶಾಸಕರಿಗಾಗಿ ಕೊಡಿಸುತ್ತೇನೆ. ಈಗ ಕುಳಿತುಕೊಳ್ಳಿ. ಈಗ ಉಮೇಶ್ ವಿ. ಕತ್ತಿಯವರ ಪ್ರಶ್ನೆ

Supply of RTC

10(145) ಶ್ರೀ. ಉಮೇಶ್ ವಿಶ್ವನಾಥ ಕತ್ತಿ (ಹುಕ್ಕೇರಿ) : ಮಾನ್ಯ ಕಂದಾಯ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) ರಾಜ್ಯದಲ್ಲಿ ಕಂದಾಯ ಇಲಾಖೆಯವರಿಂದ ಗಣಕ ಯಂತ್ರ ಮುಖಾಂತರ ವಿತರಿಸುವ ಪಹಣಿ ಪತ್ರಿಕೆಯ ಲೋಪದೋಷಗಳನ್ನು ಸರಿಪಡಿಸಲು ಯಾವ ಕ್ರಮ ಕೈಗೊಳ್ಳಲಾಗಿದೆ?

ಆ) ರೈತರು ಪಹಣಿ ಪತ್ರಿಕೆಯನ್ನು ಸರ್ಕಾರಿ ಕೇಂದ್ರದಿಂದ ಹಾಗೂ ಖಾಸಗಿಯವರಿಂದ ಪಡೆಯುತ್ತಿರುವ ಪ್ರತಿಶತ ಎಷ್ಟು?

ಶ್ರೀ ವಿ.ಶ್ರೀನಿವಾಸ್ ಪ್ರಸಾದ್ (ಮಾನ್ಯ ಕಂದಾಯ ಸಚಿವರು)

ಅ) ಪಹಣಿಗಳು ಮೂಲ ಆಕಾರ್ ಬಂದ್‌ನಲ್ಲಿರುವ ವಿವರಗಳಿಗೆ (ವಿಸ್ತೀರ್ಣ, ಖರಾಬು ವಿವರ, ಕಾಲಂ 3 ಮತ್ತು 9 ರ ವ್ಯತ್ಯಾಸ